M.V.C.**- 695/2016**
**ಪಿ.ಡಬ್ಲ್ಯೂ-2**

**ಇಂದು ದಿಃ 02-02-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲ 1 ನೇ ಎದುರುದಾರರ ಪರಃ ಶ್ರೀ ಜಿ. ಪಿ ವಕೀಲರಿಂದಃ**

ನಾನು ಐ.ಟಿ.ಐ ಮತ್ತು ಪಿ.ಯು. ಸಿ ಓದಿರುತ್ತೇನೆ. ನಾನು ಕೆ.ಎಸ್. ಆರ್. ಟಿ. ಸಿ ಯಲ್ಲಿ ಮೆಕಾನಿಕ್ ಆಗಿ ಕೆಲಸ ಮಾಡುತ್ತಿರುತ್ತೇನೆ. ಲಾರಿ ಚಾಲಕನಿಗೆ ಡಿ. ಎಲ್ ಇತ್ತು ಎನ್ನುವುದು ನಿಜ. ಸದರಿ ಲಾರಿಗೆ ವಿಮೆ ಚಾಲ್ತಿಯಲ್ಲಿತ್ತು ಎನ್ನುವುದು ನಿಜ. ನಮ್ಮ ಬೈಕಿಗೆ ಆ ದಿನ ವಿಮೆ ಇರಲಿಲ್ಲ ಎನ್ನುವುದು ನಿಜ. ನಾನು ಎಸ್. ಎಸ್. ಹೈಟೆಕ್ ಆಸ್ಪತ್ರೆಯಲ್ಲಿ 20 ದಿನ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. 5 ವರೆ ತಿಂಗಳು ಕೆಲಸಕ್ಕೆ ರಜೆ ಹಾಕಿದ್ದೆ. 5 ವರೆ ತಿಂಗಳು ಆದ ನಂತರ ನಾನು ಮೊದಲಿನಂತೆ ಕೆಲಸ ಮಾಡಲು ಅರ್ಹತೆಯನ್ನು ಹೊಂದಿರುತ್ತೇನೆ ಎಂದು ನನಗೆ ಕೆಲಸಕ್ಕೆ ಕರೆದುಕೊಂಡಿರುತ್ತಾರೆ ಎನ್ನುವುದು ನಿಜ. 5 ವರೆ ತಿಂಗಳ ನಂತರ ನಾನು ಕೆಲಸಕ್ಕೆ ಹಾಜರಾದಾಗ ಸಂಬಳದಲ್ಲಿ ಯಾವುದೇ ವ್ಯತ್ಯಾಸ ಆಗಲಿಲ್ಲ ಎಂದರೆ ಸಾಕ್ಷಿ ಇನ್ಕ್ರಿಮೆಂಟ್ ಮುಂದೂಡಿರುತಾರೆ ಎಂದು ಹೇಳುತ್ತಾರೆ. ಟ್ಯಾಂಕರ್ ಲಾರಿ ಮಲಾಸಸ್ ಹೇರಿಕೊಂಡು ಹೋಗುತ್ತಿತ್ತು. ಸದರಿ ಲಾರಿಯ ಚಾಲಕನಿಗೆ ಡಿ. ಎಲ್ ಇದ್ದು ಹಾಗೂ ವಿಮೆ ಚಾಲ್ತಿಯಲ್ಲಿದ್ದ ಕಾರಣ ಪರಿಹಾರವನ್ನು ಕೊಡಲು ವಿಮಾ ಕಂಪನಿಯವರು ಬಾಧ್ಯಸ್ಥರು ಎಂದರೆ ನಿಜ. ನಮ್ಮ ನಿರ್ಲಕ್ಷತೆಯಿಂದ ಅಪಘಾತವಾಗಿದ್ದು ಲಾರಿಯ ಚಾಲಕನಿಂದ ಆಗಿದ್ದಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕೀಯ ದಾಖಲೆಗಳು ಸೃಷ್ಟಿಮಾಡಿ ಹಾಜರುಪಡಿಸಿರುವವು ಎಂದರೆ ಸರಿಯಲ್ಲ. ನಮ್ಮ ವಾಹನಕ್ಕೆ ವಿಮೆ ಇಲ್ಲದ ಕಾರಣ ಪೋಲೀಸರ ಪ್ರಭಾವ ಬೀರಿ ಲಾರಿಯ ಚಾಲಕನ ಮೇಲೆ ಕೇಸನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**